ಕರ್ನಾಟಕ ಸರ್ಕಾರ
(ನೋಂದಣಿ ಮತ್ತು ಮುದ್ರಾಂಕ ಇಲಾಖೆ)

ಸಂಖ್ಯೆ : Comp/09/2003-04

ನೋಂದಣಿ ಮಹಾ ಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರವರ ಕಛೇರಿ,
8ನೇ ಮಹಡಿ, ಕಂದಾಯ ಭವನ
ಕೆಂಪೇಗೌಡ ರಸ್ತೆ, ಬೆಂಗಳೂರು– 09
ದಿನಾಂಕ : 05–04–2022.

ಸುತ್ತೋಲೆ–31

ವಿಷಯ: ಬುಕ್–3 ಹಾಗೂ ಬುಕ್–4 ದಸ್ತಾವೇಜುಗಳನ್ನು ಕಾವೇರಿ ರಿಪೋರ್ಟ್ಸ್ ಪೋರ್ಟಲ್‌ನಲ್ಲಿ ಪಡೆದು ದೃಢೀಕರಿಸಿ ನೀಡುವ ಬಗ್ಗೆ.

ಉಲ್ಲೇಖ: 1. ಈ ಕಛೇರಿಯ ಜ್ಞಾಪನ ಪತ್ರ ಸಂಖ್ಯೆ: Comp/21/2006–07, ದಿನಾಂಕ: 16–11–2006.
2. ಈ ಕಛೇರಿಯ ಜ್ಞಾಪನ ಪತ್ರ ಸಂಖ್ಯೆ: ಆರ್‌ಜಿಎನ್/17/2021–22, ದಿನಾಂಕ: 08–04–2021.

******

ಈ ಕಛೇರಿಯ ಉಲ್ಲೇಖ(1)ರ ಆದೇಶದಲ್ಲಿ ದಿನಾಂಕ:01–04–2004ರ ನಂತರ ನೋಂದಣಿಯಾಗಿರುವ ದಸ್ತಾವೇಜುಗಳ ದೃಢೀಕೃತ ನಕಲು ಪ್ರತಿಗಳನ್ನು ಕೋರಿ ಸಲ್ಲಿಸುವ ಅರ್ಜಿಗಳಿಗೆ ಕಾವೇರಿ ಸಿ.ಡಿಗಳಿಂದ ನಕಲು ಪ್ರತಿಗಳ ಪ್ರಿಂಟ್ ತೆಗೆದು ದೃಢೀಕರಿಸಿ ನೀಡಲು ತಿಳಿಸಲಾಗಿರುತ್ತದೆ. ಹಾಗೂ ಉಲ್ಲೇಖ(2)ರ ಆದೇಶದಲ್ಲಿ 2004ನೇ ಸಾಲಿನ ಅವಧಿಯಿಂದ ನೋಂದಣಿಯಾದ ದಸ್ತಾವೇಜುಗಳ ದೃಢೀಕೃತ ನಕಲುಗಳನ್ನು ಕಡ್ಡಾಯವಾಗಿ ಆನ್‌ಲೈನ್ ಮುಖಾಂತರ ಸಾರ್ವಜನಿಕರಿಗೆ ನೀಡಲು ತಿಳಿಸಲಾಗಿರುತ್ತದೆ.

ಕಾವೇರಿ ಆನ್‌ಲೈನ್ ಸೇವೆಗಳಲ್ಲಿ ಬುಕ್–1ರ ದಸ್ತಾವೇಜುಗಳ ದೃಢೀಕೃತ ಪ್ರತಿಗಳನ್ನು ನೀಡಲು ಮಾತ್ರ ಅವಕಾಶವಿರುವುದರಿಂದ ಬುಕ್–3 ಹಾಗೂ ಬುಕ್–4 ದಸ್ತಾವೇಜುಗಳ ದೃಢೀಕೃತ ಪ್ರತಿ ಕೋರಿ ಸಾರ್ವಜನಿಕರು ಸಲ್ಲಿಸುವ ಅರ್ಜಿಗಳಿಗೆ ಸಂಬಂಧಿಸಿದಂತೆ ಕಡ್ಡಾಯವಾಗಿ ಕಾವೇರಿ ರಿಪೋರ್ಟ್ಸ್ ಪೋರ್ಟಲ್‌ನ "Download Enclosures" ಆಯ್ಕೆಯಲ್ಲಿ ಸಕಾರಣವನ್ನು ನೀಡಿ ದಸ್ತಾವೇಜನ್ನು ಡೌನ್‌ಲೋಡ್ ಮಾಡಿ ದೃಢೀಕರಿಸಿ ನೀಡಲು ಸೂಚಿಸಿದೆ. ಹಾಗೂ ಸಿ.ಡಿಗಳಿಂದ ಬುಕ್–3 ಹಾಗೂ ಬುಕ್–4 ದಸ್ತಾವೇಜುಗಳ ಪ್ರತಿ ಪಡೆದು ದೃಢೀಕರಿಸಿ ನೀಡದಿರಲು ಸೂಚಿಸಿದೆ.

5/4

ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರು, ಬೆಂಗಳೂರು.

ಇವರಿಗೆ,

ರಾಜ್ಯದ ಎಲ್ಲಾ ಜಿಲ್ಲಾನೋಂದಣಾಧಿಕಾರಿಗಳಿಗೆ ಹಾಗೂ ಉಪನೋಂದಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.